ಅ) ಬೇಲೂರು ತಾಲ್ಲೂಕಿನಲ್ಲಿರುವ ಯಗಚಿ ಜಲಾಶಯದಿಂದ ಮಾದಿಹಳ್ಳಿ ಹೋಬಳಿ, ಹಳೇಬೀಡು ಹೋಬಳಿಗಳ ಏತ ನೀರಾವರಿ ಯೋಜನೆಯಿಂದ ಕೆರೆಗಳಿಗೆ ನೀರನ್ನು ಒದಗಿಸುತ್ತಿರುವುದು ನಿಜವೇ;

ಆ) ಈ ಯೋಜನೆ ಮಂಜೂರಾಗಿದ್ದಲ್ಲಿ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು (ವಿವರ ನೀಡುವುದು)?

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು):

ಅ) ಹೌದು, ಯೋಜನಾ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಬೇಲೂರು ತಾಲ್ಲೂಕಿನಲ್ಲಿರುವ ಯಗಚಿ ಜಲಾಶಯದಿಂದ ಮಾದಿಹಳ್ಳಿ ಹೋಬಳಿ, ಹಳೇಬೀಡು ಹೋಬಳಿಗಳ ಕೆರೆಗಳಿಗೆ ಏತ ನೀರಾವರಿ ಯೋಜನೆಯಿಂದ ನೀರನ್ನು ಒದಗಿಸುವ ಯೋಜನಾ ವರದಿಯನ್ನು ರೂ.9.00 ಕೋಟಿಗಳಿಗೆ ಕಾವೇರಿ ನೀರಾವರಿ ನಿಗಮವು ತಯಾರಿಸಿದ್ದು, ಯೋಜನಾ ವರದಿಯು ಆಡಳಿತಾತ್ಮಕ ಅನುಮೋದನೆಗಾಗಿ ಸರ್ಕಾರದಲ್ಲಿ ಸ್ವೀಕೃತವಾಗಿದೆ. ಸರ್ಕಾರದಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಅನುಮೋದನೆಯ ನಂತರ ಕಾಮಗಾರಿಯನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಸಣ್ಣ ನೀರಾವರಿ ವಾಪ್ತಿಯ ಕೆರೆಗಳು

ಶ್ರೀ ಸಂಪಂಗಿ. ಎನ್ (ಬಾಗೇಪಲ್ಲಿ): ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಇದುವರೆವಿಗೂ ಸಣ್ಣ ನೀರಾವರಿಯ ಅಭಿವೃದ್ಧಿಗಾಗಿ ಕೈಗೊಳ್ಳಲಾದ ಯೋಜನೆಗಳು ಯಾವುವು; ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ (ವಿವರ ಒದಗಿಸುವುದು);

ಆ) ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಕೆರೆಯ ಅಭಿವೃದ್ಧಿಗೆಂದು ಖರ್ಚು ಮಾಡಿರುವ ಅನುದಾನದ ಮೊತ್ತವೆಷ್ಟು (ವಿವರ ಒದಗಿಸುವುದು)?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು):

ಅ) ನೀರಾವರಿ ಅಭಿವೃದ್ಧಿಗಾಗಿ ಹೊಸಕೆರೆ, ಏತ ನೀರಾವರಿ ಹಾಗೂ ಪಿಕಪ್/ಅಣೆಕಟ್ಟುಗಳನ್ನು ಸಣ್ಣ ನೀರಾವರಿ ಇಲಾಖೆಯಿಂದ ಕೈಗೊಳ್ಳಲಾಗುತ್ತಿದೆ.

ಇದಲ್ಲದೆ ಅಸ್ತಿತ್ವದಲ್ಲಿರುವ ಸಣ್ಣ ನೀರಾವರಿ ರಚನೆಗಳ ದುರಸ್ತಿ/ಪುನರುಜ್ಜೀವನ, ಮುಂತಾದ ಅಭಿವೃದ್ಧಿ ಕಾರ್ಯಗಳನ್ನು ಸಹ ಕೈಗೊಳ್ಳಲಾಗುತ್ತಿದೆ.

ರಾಜ್ಯ ಮತ್ತು ಕೇಂದ್ರ ಸರ್ಕಾರದ ಅನುದಾನದೊಂದಿಗೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ವಿವರ ಕೆಳಕಂಡಂತಿದೆ:

1) ರಾಜ್ಯ ಸರ್ಕಾರದ ಆಯವ್ಯಯದಲ್ಲಿ ಲಭ್ಯವಾಗು ಅನುದಾನದಲ್ಲಿ ಹೊಸ ಸಣ್ಣ ನೀರಾವರಿ ರಚನೆಗಳ ನಿರ್ಮಾಣವನ್ನು ಹಾಗೂ ಅಸ್ತಿತ್ವದಲ್ಲಿರುವ ಸಣ್ಣ ನೀರಾವರಿ ರಚನೆಗಳ ಅಭಿವೃದ್ಧಿ/ಪುನರುಜ್ಜೀವನ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ.

2) ಭಾರತ ಸರ್ಕಾರದ ಪುರಸ್ಕೃತ ಯೋಜನೆಗಳಾದ ಎ.ಐ.ಬಿ.ಪಿ. ಅಡಿ ಹೊಸ ಸಣ್ಣ ನೀರಾವರಿ ರಚನೆಗಳನ್ನು ಮತ್ತು ಆರ್.ಆರ್&ಆರ್ ಅಡಿ ಅಸ್ತಿತ್ವದಲ್ಲಿರುವ ಸಣ್ಣ ನೀರಾವರಿ ರಚನೆಗಳ ಪುನರುಜ್ಜೀವನ ಕಾರ್ಯಗಳನ್ನು ಹಮ್ಮಿಕೊಳ್ಳಲಾಗಿದೆ.

3) ನಬಾರ್ಡ್ ಸಂಸ್ಥೆಯ ಸಾಲ ಸೌಲಭ್ಯದಿಂದ ಸಣ್ಣ ನೀರಾವರಿ ಹೊಸ ರಚನೆಗಳ ನಿರ್ಮಾಣ, ಅಸ್ತಿತ್ವದಲ್ಲಿರುವ ರಚನೆಗಳ ಅಭಿವೃದ್ಧಿ ಕಾರ್ಯ ಹಮ್ಮಿಕೊಳ್ಳಲಾಗಿದೆ.

4) ವಿಶ್ವಬ್ಯಾಂಕ್ ನೆರವಿನ ಯೋಜನೆಯಡಿ ಜಲಸಂವರ್ಧನೆ ಯೋಜನಾ ಸಂಘದ ಮೂಲಕ ಆಯ್ದ ಸಣ್ಣ ನೀರಾವರಿ ಹಾಗೂ ಜಿಲ್ಲಾ ಪಂಚಾಯತ್ ಕರೆಗಳ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

ಆ) ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೇಂದ್ರ ಸರ್ಕಾರದ ಆರ್.ಆರ್.ಆರ್ ಯೋಜನೆಯಡಿ 25 ಕೆರೆಗಳ ಅಭಿವೃದ್ಧಿಗಾಗಿ ರೂ. 318.60 ಲಕ್ಷಗಳು, ಪ್ರಧಾನ ಕಾಮಗಾರಿಗಳಡಿ 3 ಕೆರೆಗಳ ಅಭಿವೃದ್ಧಿಗಾಗಿ ರೂ.83.12 ಲಕ್ಷಗಳು, ವಿಶೇಷ ಅಭಿವೃದ್ಧಿ ಯೋಜನೆ ಅಡಿ 2 ಕೆರೆಗಳ ಅಭಿವೃದ್ಧಿಗಾಗಿ ರೂ.53.72 ಲಕ್ಷಗಳು, ವಿಶೇಷ ಘಟಕ ಯೋಜನೆಯಡಿ 10 ಕೆರೆಗಳನ್ನು ಅಭಿವೃದ್ಧಿ ಪಡಿಸಲು ರೂ.36.34 ಲಕ್ಷಗಳು, ಹೀಗೆ ಒಟ್ಟಾರೆ ಮಾರ್ಚ್ 2011ರ ಅಂತಕ್ಕೆ ರೂ.491.90 ಲಕ್ಷಗಳನ್ನು ಖರ್ಚು ಮಾಡಲಾಗಿರುತ್ತದೆ

ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಸಮುದಾಯ ಆಧಾರಿತ ಕೆರೆ ನಿರ್ವಹಣೆಯಲ್ಲಿ 172 ಕೆರೆಗಳನ್ನು ಸಮುದಾಯದ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲು ಕೈಗೆತ್ತಿಕೊಂಡಿದ್ದು, ಅವುಗಳಲ್ಲಿ 26 ಸಣ್ಣ ನೀರಾವರಿ ಕೆರೆಗಳ ಅಭಿವೃದ್ಧಿಗಾಗಿ ರೂ.4.90 ಕೋಟಿಗಳ ವೆಚ್ಚದ ಸಮಗ್ರ ಕೆರೆ ಅಭಿವೃದ್ಧಿ ಯೋಜನೆ (ಐಟಿಡಿಪಿ)ಯನ್ನು ತಯಾರಿಸಿದ್ದು, ಇಲ್ಲಿಯವರೆಗೆ ರೂ.3.25 ಕೋಟಿಗಳನ್ನು ಖರ್ಚುಮಾಡಲಾಗಿದೆ. 146 ಜಿಲ್ಲಾ ಪಂಚಾಯಿತಿ ಕೆರೆಗಳ

ಅಭಿವೃದ್ಧಿಗಾಗಿ ರೂ.10.98 ಕೋಟಿಗಳ ವೆಚ್ಚದ ಸಮಗ್ರ ಕೆರೆ ಅಭಿವೃದ್ಧಿ ಯೋಜನೆ (ಐಟಿಡಿಪಿ)ಯನ್ನು ತಯಾರಿಸಿದ್ದು, ಇಲ್ಲಿಯವರೆಗೆ ರೂ.9.15 ಕೋಟಿಗಳನ್ನು ಖರ್ಚುಮಾಡಲಾಗಿದೆ.

ಕೈಗಾರಿಕೆ ಸ್ಥಾಪನೆ ಸಂಬಂಧ ಭೂಸ್ವಾಧೀನ ಪ್ರಕ್ರಿಯೆ

27 (16) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜನಗರ): ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಾದ್ಯಂತ ಹೊಸದಾಗಿ ಸ್ಥಾಪಿಸಲಿರುವ / ಪ್ರಾರಂಭಿಸಲಿರುವ ಕೈಗಾರಿಕೆಗಳಾವುವು (ಜಿಲ್ಲಾವಾರು ವಿವರಗಳನ್ನು ನೀಡುವುದು);

ಆ) ಹೊಸ ಕೈಗಾರಿಕೆಗಳ ಸ್ಥಾಪನೆ ಸಂಬಂಧ ಕೈಗೊಂಡಿರುವ ಭೂಸ್ವಾಧೀನ ಪ್ರಕ್ರಿಯೆಗಳ ಸಧ್ಯದ ಸ್ಥಿತಿಗತಿಗಳೇನು (ವಿವರ ನೀಡುವುದು);

ಇ) ರೈತರಿಂದ / ಭೂ ಮಾಲೀಕರಿಂದ ಎಲ್ಲೆಲ್ಲಿ ಭೂಸ್ವಾಧೀನ ಪ್ರಕ್ರಿಯೆಗೆ ವಿರೋಧ ವ್ಯಕ್ತವಾಗಿದೆ (ವಿವರ ನೀಡುವುದು);

ಈ) ಅವರುಗಳ ಬೇಡಿಕೆಗಳ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು)?

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ರಾಜ್ಯ ಉನ್ನತಮಟ್ಟದ ಅನುಮೋದನಾ ಸಮಿತಿಯಲ್ಲಿ ಅನುಮೋದನೆಗೊಂಡ 339 ಕೈಗಾರಿಕೆಗಳು ರಾಜ್ಯದಲ್ಲಿ ಹೊಸದಾಗಿ ಸ್ಥಾಪಿಸಲಿವೆ / ಪ್ರಾರಂಭಿಸಲಿವೆ. ಜಿಲ್ಲಾವಾರು ಹಾಗೂ ವಲಯವಾರು ವಿವರಗಳನ್ನು ಅನುಬಂಧ–1 & 2ರಲ್ಲಿ ನಮೂದಿಸಲಾಗಿದೆ.

ಇದೇ ರೀತಿ ರಾಜ್ಯ ಮಟ್ಟ ಏಕಗವಾಕ್ಷಿ ಸಮಿತಿಯು ಅನುಮೋದಿಸಿರುವ 1081 ಕೈಗಾರಿಕೆಗಳು ಸ್ಥಾಪಿಸಲಿವೆ / ಪ್ರಾರಂಭಿಸಲಿವೆ. ಜಿಲ್ಲಾವಾರು ಹಾಗೂ ವಲಯವಾರು ವಿವರಗಳನ್ನು ಅನಬಂಧ–3 & 4ರಲ್ಲಿ ನಮೂದಿಸಲಾಗಿದೆ.

ಕೆ.ಐ.ಎ.ಡಿ.ಬಿ.ಯು ರಾಜ್ಯಾದ್ಯಂತ ಲ್ಯಾಂಡ್ ಬ್ಯಾಂಕ್ ಯೋಜನೆಯಡಿ ಒಟ್ಟು 121304–22 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಗುರುತಿಸಿದ್ದು, ಈ ಪೈಕಿ 57016–29 ಎಕರೆ ಜಮೀನಿಗೆ ಪ್ರಾಥಮಿಕ ಅಧಿಸೂಚನೆ ಮತ್ತು 288917–16 ಎಕರೆ ಜಮೀನಿಗೆ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯು ವಿವಿಧ ಹಂತದ ವಿವರಗಳನ್ನು ಅನುಬಂಧ–5ರಲ್ಲಿ ನಮೂದಿಸಲಾಗಿದೆ.